ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp. 84-95.
©*IIMRD*, Mysuru
www.iimrd.com

# ಅಪ್ಪು – ಯುವ ಜನತೆಯ ಬದುಕಿಗೊಂದು ಆದರ್ಶವಾದ ವ್ಯಕ್ತಿ ಮತ್ತು ವ್ಯಕ್ತಿತ್ವ

**ಡಾ.ನಾಗರಾಜ ಕೆ.ಸಿ.[1] ಮತ್ತು ದಿವ್ಯ ಎಂ.ಬಿ.[2]**
[1]ಸಹಾಯಕ ಪ್ರಾಧ್ಯಾಪಕರು, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ,
ಆಚಾರ್ಯ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು.
[2]ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಡಗು.

**ಸಾರಾಂಶ (Abstract)**

*ಕನ್ನಡ ಚಿತ್ರರಂಗದ ಯುವ ನಟರಲ್ಲಿ ಪುನೀತ್ ರಾಜ್‌ಕುಮಾರ್‌ರವರೂ ಒಬ್ಬರು. ಇತ್ತೀಚೆಗಷ್ಟೇ ಅವರ ಅಕಾಲಿಕ ಮರಣವು, ಅವರ ಕುಟುಂಬಸ್ಥರು, ಬಂಧು–ಮಿತ್ರರು ಹಾಗೂ ಅಪಾರ ಅಭಿಮಾನಿಗಳನ್ನು ದುಃಖಿತರನ್ನಾಗಿಸಿದೆ. ಇಡೀ ಯುವ ಸಮುದಾಯಕ್ಕೆ ಆದರ್ಶಪ್ರಾಯವಾದ ವ್ಯಕ್ತಿತ್ವ ಇವರದು. ಕೇವಲ ನಟನೆ ಮಾತ್ರವಲ್ಲದೇ, ಸಿನಿಮಾ ರಂಗದ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಕರ್ನಾಟಕ ಮಾತ್ರವಲ್ಲದೇ ದೇಶ, ವಿದೇಶಗಳಲ್ಲಿಯೂ ಕೋಟ್ಯಂತರ ಅಭಿಮಾನಿಗಳನ್ನು ಹೊಂದಿದ್ದವರು. ಮನೆಯಲ್ಲಿನ ಚಿಕ್ಕ ಮಕ್ಕಳಿಂದ ಹಿರಿಯ ತಲೆಮಾರಿನವರಿಗೂ ಅಪ್ಪು ಎಂದರೆ ಬಹಳ ಅಚ್ಚು–ಮೆಚ್ಚು. ಅವರ ಸಿನಿಮಾಗಳನ್ನು ಹೊರತುಪಡಿಸಿ, ಆಡಿಯೋ, ವಿಡಿಯೋ ಬಿಡುಗಡೆ, ಸಿನಿಮಾ ಪ್ರಚಾರ, ಸಿನಿಮಾ ಬಿಡುಗಡೆ, ಸಂಭ್ರಮಾಚರಣೆ, ಕೌಟುಂಬಿಕ ಸಮಾರಂಭಗಳು, ಸರ್ಕಾರಿ ಕಾರ್ಯಕ್ರಮಗಳು, ಉದ್ಘಾಟನೆಗಳು, ಪ್ರಶಸ್ತಿ ಪ್ರಧಾನ ಸಮಾರಂಭಗಳು, ಸಂದರ್ಶನಗಳು, ಪ್ರವಾಸ, ಶೂಟಿಂಗ್ ಹೀಗೆ ಎಲ್ಲದರಲ್ಲಿಯೂ ಅವರದು ಸಿಂಪಲ್ ಗೆಟಪ್ ಮತ್ತು ಮಂದಸ್ಮಿತ ಮುಖಭಾವ. ತಮ್ಮ ಮನೆಯ ಕೆಲಸದವರಿಂದಿಡಿದು, ದೇಶದ ಪ್ರಧಾನಿಯ ತನಕವೂ ಅದೇ ಸಜ್ಜನಿಕೆ ಮತ್ತು ಅದೇ ಸರಳತೆ. ಕನ್ನಡ ಚಿತ್ರರಂಗದಲ್ಲಿ 'ವರನಟ'ರೆಂದೇ ಪ್ರಸಿದ್ಧರಾದ ಡಾ.ರಾಜ್‌ಕುಮಾರ್‌ರವರ ನಂತರ ಅವರ ಇಡೀ ಕುಟುಂಬದಲ್ಲಿ ಅಜಾತಶತ್ರುವಾಗಿ 'ಚಂದನವನ'ದ ಸಾಂಸ್ಕೃತಿಕ ರಾಯಭಾರಿಯಾಗಿದ್ದವರು, ಜೊತೆಗೆ ತನ್ನ ನಟನೆಯ ಮೂಲಕ ಅಸಂಖ್ಯಾತ ಅಭಿಮಾನಿಗಳ ಹೃದಯವನ್ನು ತಲುಪಿದ್ದರು. ಪ್ರಸ್ತುತ ಲೇಖನದಲ್ಲಿ, ಇಂತಹ ಅದ್ಭುತ ಕಲಾವಿದನ ಆದರ್ಶ, ವ್ಯಕ್ತಿ ಮತ್ತು ವ್ಯಕ್ತಿತ್ವವನ್ನು ಅವಲೋಕಿಸಲು ಮತ್ತು ಸಾಮಾಜಿಕ ಮತ್ತು ವೈಯಕ್ತಿಕ ಜೀವನ ಕುರಿತು ಹೇಳುವ ಪ್ರಯತ್ನವಾಗಿದೆ.*

**ಮುಖ್ಯಪದಗಳು (Keywords):** *ಪುನೀತ್ ರಾಜ್‌ಕುಮಾರ್, ಚಿತ್ರರಂಗ, ರಾಯಭಾರಿ, ಗಾಯಕ, ಯುವಜನತೆ, ವ್ಯಕ್ತಿತ್ವ, ಮೌಲ್ಯಗಳು.*

*Please cite this article as:* *ಡಾ. ನಾಗರಾಜ. ಕೆ.ಸಿ.* ಮತ್ತು *ದಿವ್ಯ. ಎಂ.ಬಿ.. (2022).* ಅಪ್ಪು – ಯುವ ಜನತೆಯ ಬದುಕಿಗೊಂದು ಆದರ್ಶವಾದ ವ್ಯಕ್ತಿ ಮತ್ತು ವ್ಯಕ್ತಿತ್ವ. *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ. 84–95.*

**ಪೀಠಿಕೆ**

*"ಯಾರೋ ನೀನು..? ಯಾರೋ ನೀನು..?*
*ಕರುನಾಡನು ಕಣ್ಣೀರಲಿ ಮುಳುಗಿಸಿದವನು*
*ಬಂಧು ನೀನಲ್ಲ .. ಬಳಗ ನೀನಲ್ಲ..*
*ನಿನಗಾಗಿ ಜಗವೇ ಮಿಡಿದಿದೆಯಲ್ಲ...!*

ಯುವ ಸಾಹಿತಿ ಹಾಗೂ ಗಾಯಕ ರಾಜ್‌ಕಿಶೋರ್‌ರವರಿಂದ ಮೂಡಿಬಂದ ಈ ಸಾಲುಗಳು ಬಹುಶಃ ಪುನೀತ್ ರಾಜ್‌ಕುಮಾರ್‌ರವರ ಸಂಪೂರ್ಣ ವ್ಯಕ್ತಿತ್ವವನ್ನು ವಿವರಿಸಲು ಶಕ್ತವಾಗಬಹುದೇನೋ. ಏಕೆಂದರೆ ಅಕ್ಟೋಬರ್ 29, 2021ರಂದು ತಮ್ಮ 46ನೇ ವಯಸ್ಸಿನಲ್ಲಿನ ಅವರ ಆಕಸ್ಮಿಕ ನಿಧನದಿಂದಾಗಿ ಇಡೀ ಕರುನಾಡು ಮಾತ್ರವಲ್ಲದೇ, ದೇಶ–ವಿದೇಶಗಳಿಂದಲೂ ಸಾಂತ್ವನದ ಮಹಾಪೂರವೇ ಹರಿದು ಬಂತು. ಕೇವಲ ತೆರೆಯ ಮೇಲೆ ಅಷ್ಟೇ ಅಲ್ಲದೇ ನಿಜ ಜೀವನದಲ್ಲಿ ಅವರು ನಡೆದುಕೊಳ್ಳುತ್ತಿದ್ದ ರೀತಿ, ನಿಷ್ಕಲ್ಮಶ ನಗು, ಸೌಮ್ಯ ಸ್ವಭಾವ, ಆತ್ಮೀಯತೆ, ಸರಳತೆ, ಹಿರಿಯರೊಂದಿಗಿನ ಗೌರವ, ಕಿರಿಯರೊಂದಿಗಿನ ಹೊಂದಾಣಿಕೆ, ಸಹಾಯ ಮನೋಭಾವ, ಹೊಸ ಪ್ರತಿಭೆಗಳು–ತಂತ್ರಜ್ಞರುಗಳಿಗೆ ನೀಡುತ್ತಿದ್ದ ಪ್ರೋತ್ಸಾಹ, ಸಿನಿಮಾ ಮಾತ್ರವಲ್ಲದೇ ಇತರ ಕ್ಷೇತ್ರಗಳ ಬಗ್ಗೆಯೂ ಅವರಿಗಿದ್ದ ಅಭಿಮಾನ, ಸದಭಿರುಚಿ, ಸದಾ ಕಲಿಯುತ್ತಲೇ ಇರಬೇಕೆಂಬ ಹಂಬಲ, ಕ್ರಿಯಾಶೀಲತೆ, ಎಲ್ಲರಲ್ಲೊಬ್ಬನಾಗಿ ಒಂದಾಗುವ ರೀತಿ, ಜೊತೆಗೆ ತೆರೆಯಿಂದೀಚೆಗೆ ಎಷ್ಟರ ಮಟ್ಟಿಗೆ ಸಮಾಜವನ್ನು, ಸಾರ್ವಜನಿಕ ಜೀವನದಲ್ಲಿ ತಲುಪಬಹುದೆಂದು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟಿದ್ದಾರೆ. ಅವರ ನಿಧನಕ್ಕೆ ಭಾರತೀಯ ಸಿನಿಮಾ ರಂಗವು ಯಾವುದೇ ಭಾಷೆಗಳ ತಾರತಮ್ಯವಿಲ್ಲದೇ ಕಂಬನಿ ಮಿಡಿಯಿತು. ಅವರ ಹೆಸರಿನಲ್ಲಿ ಅಪಾರ ಅಭಿಮಾನಿಗಳ ಸಂಘಗಳು ಜನ್ಮ ತಳೆದಿವೆ. ಪುನೀತ್ ತಮ್ಮನ್ನು ತಾವು ಕೇವಲ ನಟರನ್ನಾಗಿ ಮಾತ್ರವೇ ಸೀಮಿತಗೊಳಿಸಲಿಲ್ಲ. ಅದರೊಂದಿಗೆ ಒಬ್ಬ ಅದ್ಭುತ ಗಾಯಕ, ನಿರ್ಮಾಪಕ, ಸಮಾಜ ಸೇವಕ, ಫಿಟ್ನೆಸ್ ಗುರು, ಸರ್ಕಾರಿ ಯೋಜನೆಗಳ ಉಚಿತ ರಾಯಭಾರಿ, ಸಾಮಾಜಿಕ ಕಳಕಳಿಯನ್ನೊಂದಿದ್ದ 'ಯೂತ್ ಐಕಾನ್' ಆಗಿದ್ದವರು. ಅವರ ಸಾವಿನೊಂದಿಗೆ ಯುವಜನತೆಯ ದೇಹಾರೋಗ್ಯ, ವ್ಯಾಯಾಮ, ವಿಶ್ರಾಂತಿ, ಆಹಾರ ಪದ್ಧತಿ, ಜೀವನ ಶೈಲಿ, ಆಧ್ಯಾತ್ಮ ಹೀಗೆ ಹತ್ತು ಹಲವಾರು ಕ್ಷೇತ್ರದಲ್ಲಿನ ಅಂಶಗಳನ್ನು ಚರ್ಚಿಸಲಾಯಿತು. ಆದ್ದರಿಂದ ಈ ಲೇಖನದ ಮೂಲಕ ಅವರ ಜೀವನದ ಕೆಲವು ವೈಶಿಷ್ಟ್ಯ ಮತ್ತು ಮಹತ್ವ ಪೂರ್ಣ ಅಂಶಗಳನ್ನು ಮತ್ತೊಮ್ಮೆ ಅವಲೋಕಿಸಲು ಪ್ರಯತ್ನಿಸಲಾಗುತ್ತಿದೆ.

**ಉದ್ದೇಶಗಳು**

- ಪುನೀತ್‌ರವರು ಕನ್ನಡ ಸಿನಿರಂಗಕ್ಕೆ ನೀಡಿದ ಕೊಡುಗೆಗಳನ್ನು ಅರಿಯುವುದು.
- ಯುವ ಜನರ ಜೀವನದಲ್ಲಿ ಪುನೀತ್‌ರವರ ವ್ಯಕ್ತಿತ್ವದಿಂದ ಕಲಿಯಬಹುದಾದ ಅಂಶಗಳನ್ನು ತಿಳಿಯುವುದು.
- ಅವರು ಬದುಕಿದ ರೀತಿಯ ಮೂಲಕ ದೇಶದ ಒಬ್ಬ ಜವಾಬ್ದಾರಿಯುತ ನಾಗರೀಕನಿಗೆ ಇರಬೇಕಾದ ನಾಯಕತ್ವ, ಶಿಸ್ತು, ಸರಳತೆ, ಸಂಯಮಗಳಂತಹ ಜೀವನದ ಆದರ್ಶಾತ್ಮಕ ಮೌಲ್ಯಗಳನ್ನು ಅರ್ಥೈಸಿಕೊಳ್ಳುವುದು.

**ಅಧ್ಯಯನದ ಮಹತ್ವ**

ಪ್ರಸ್ತುತ ಆಧುನಿಕ ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಕೂಡಾ ಹಲವಾರು ರೀತಿಗಳಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಲು ಬಯಸುತ್ತಾನೆ. ಈ ಹಾದಿಯಲ್ಲಿ ನಡೆಯಲು ತನ್ನಲ್ಲಿರುವ ಒಂದಷ್ಟು ಪ್ರತಿಭೆಗಳನ್ನು ಪ್ರದರ್ಶಿಸುತ್ತಾನೆ. ಇದು ವೈಯಕ್ತಿಕ ಬದುಕಿಗೆ ಹಾಗೂ ಆರ್ಥಿಕತೆಗೆ ಅನಿವಾರ್ಯವೂ ಕೂಡಾ. ಅಂತೆಯೇ ಪುನೀತ್‌ರಾಜ್‌ಕುಮಾರ್‌ರವರು ತಮ್ಮಲ್ಲಿನ ನಟನಾ ಕೌಶಲ್ಯದಿಂದಾಗಿ ಬಾಲ್ಯದಲ್ಲಿಯೇ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದವರು. ಕ್ರಮೇಣ ನಾಯಕನಟನಾಗಿ ತನ್ನ ಅದ್ಭುತ ನಟನೆಯಿಂದಾಗಿ ಕೋಟ್ಯಂತರ ಅಭಿಮಾನಿಗಳನ್ನು ಸಂಪಾದಿಸಿದರು. ಆದರೆ ಕೇವಲ ನಟನೆಗಷ್ಟೇ ತಮ್ಮ ಬದುಕನ್ನು ಸೀಮಿತಗೊಳಿಸಿಕೊಳ್ಳದೇ, ಸಾರ್ವಜನಿಕ ಜೀವನದಲ್ಲಿಯೂ ಒಬ್ಬ ಉತ್ತಮ ನಾಗರೀಕನ ಜವಾಬ್ದಾರಿಗಳನ್ನು ನಿರ್ವಹಿಸಿದವರು. ಕೇವಲ ತಮ್ಮ 46 ವರ್ಷದ ಬದುಕಿನಲ್ಲಿಯೇ, ತಮ್ಮ ಜೀವನವನ್ನು ಅದ್ಭುತವಾಗಿ ರೂಪಿಸಿಕೊಂಡವರು. ಆದ್ದರಿಂದಲೇ ಅವರ ವೃತ್ತಿ ಬದುಕಿನ ಮೇಲೆ ಒಂದಷ್ಟು ಬೆಳಕನ್ನು ಚೆಲ್ಲುತ್ತಾ, ಅದರಿಂದ ಯುವಜನತೆಯು ತಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳಬಹುದಾದ ಅಂಶಗಳ ಕುರಿತಂತೆ ತಿಳಿದುಕೊಳ್ಳಲು ಈ ಪ್ರಸ್ತುತ ಅಧ್ಯಯನವು ಮಹತ್ವದ್ದಾಗಿದೆ.

**'ಪುನೀತ್'ರ ಹುಟ್ಟು**

ಸಿನಿಮಾ ರಂಗಕ್ಕಾಗಿ ತಮ್ಮ ಹೆಸರನ್ನು ಬದಲಾಯಿಸಿಕೊಂಡ ಪುನೀತ್‌ರ ಬಾಲ್ಯದ ಹೆಸರು ಲೋಹಿತ್. ಇವರು 1975 ಮಾರ್ಚ್ 17ರಂದು ಚೆನ್ನೈನಲ್ಲಿ ಜನಿಸಿದರು. ತಂದೆ ಹೆಸರಾಂತ ಕನ್ನಡ ಚಿತ್ರನಟ ಡಾ.ರಾಜ್‌ಕುಮಾರ್, ತಾಯಿ ಪಾರ್ವತಮ್ಮ. ತಮ್ಮ ಬಾಲ್ಯದ ಜೀವನವನ್ನು ಅವಿಭಕ್ತ ಕುಟುಂಬದಲ್ಲಿ ಒಬ್ಬ ಯುವರಾಜನಂತೆಯೇ, ಜೀವನವನ್ನು ಕಳೆದರು. ಸ್ಟಾರ್ ಕುಟುಂಬದ ಹಿನ್ನೆಲೆಯಿದ್ದರೂ ಪುನೀತ್‌ರವರು ಯಾವ ಹಮ್ಮು–ಬಿಮ್ಮಿಲ್ಲದೇ ತಮ್ಮ ಬದುಕನ್ನು ವಿಶೇಷವಾದ ರೀತಿಯಲ್ಲಿ ಕಟ್ಟಿಕೊಂಡರು.

**ವ್ಯಕ್ತಿತ್ವ**

ಪುನೀತ್‌ರವರ ಸಾವಿನ ಸುದ್ದಿ ಕೇಳುತ್ತಿದ್ದಂತೆ ಪುಟ್ಟ ಮಕ್ಕಳಿಂದಿಡಿದು, ವೃದ್ಧಾಪ್ಯದವರೆಗಿನ ಎಲ್ಲಾ ವಯೋಮಾನದವರು, ತಮ್ಮ ಮನೆ ಮಗನನ್ನೇ ಕಳೆದುಕೊಂಡಂತೆ ಪರಿಭಾವಿಸುತ್ತಾರೆಂದರೆ, ಅವರ ವ್ಯಕ್ತಿತ್ವವೇ ಅಂತಹದ್ದು ಎಂಬುದನ್ನು ಸುಲಭವಾಗಿ ಗ್ರಹಿಸಬಹುದು. ಕನ್ನಡ ಸಿನಿಕ್ಷೇತ್ರದಲ್ಲಿ ತಮ್ಮ ಸರಳ, ಸೌಮ್ಯ ನಡವಳಿಕೆಗಳಿಂದಾಗಿ 'ಅಜಾತಶತ್ರು'ವಾಗಿಯೇ ತಮ್ಮನ್ನು ಗುರುತಿಸಿಕೊಂಡಿದ್ದರು. ತೆರೆಯಿಂದಾಚೆಯು ಕೂಡ ಅವರು ಯಾವುದೇ ಅಹಂ ಇಲ್ಲದೇ ಎಲ್ಲರೊಂದಿಗೆ ಬೆರೆಯುತ್ತಿದ್ದರು. ತಮ್ಮ ವೈಯಕ್ತಿಕ ಹಾಗೂ ವೃತ್ತಿ ಬದುಕಿನ ನಡೆಗಳಿಂದಾಗಿ ಎಂದಿಗೂ ಸಾರ್ವಜನಿಕ ದೂಷಣೆಗೆ ಒಳಗಾದವರಲ್ಲ. ಆದ್ದರಿಂದ ಅವರ ವ್ಯಕ್ತಿತ್ವವನ್ನು ಅರಿಯ ಬೇಕಾದರೆ ಸಿನಿಮಾರಂಗದಲ್ಲಿ ಅವರು ಮಾಡಿರುವ ಸಾಧನೆಗಳ ಜೊತೆಯಲ್ಲಿ, ಸಾಮಾಜಿಕ ಜೀವನದಲ್ಲಿ ಒಬ್ಬ ಜವಾಬ್ದಾರಿಯುತ ವ್ಯಕ್ತಿಯಾಗಿ ಅವರು ಮಾಡಿರುವ ಒಂದಷ್ಟು ಕೆಲಸ ಕಾರ್ಯಗಳನ್ನು ತಿಳಿದುಕೊಳ್ಳುವುದು ಅವಶ್ಯಕ.

**ಕಲಾವಿದರಾಗಿ – 'ಸ್ಟಾರ್ ಕಿಡ್'**

ಕನ್ನಡ ಚಿತ್ರರಂಗದಲ್ಲಿ ಡಾ. ರಾಜ್‌ಕುಮಾರ್‌ರವರು ಎಂದೂ ಮರೆಯಲಾಗದ ದಂತಕಥೆ. ತಮ್ಮ ನೈಜ ನಟನೆಯ ಮೂಲಕ ಅಸಂಖ್ಯಾತ ಅಭಿಮಾನಿ ಬಳಗವನ್ನು ಹೊಂದಿದ್ದವರು. ಇಂದಿಗೂ ಸಿನಿಮಾರಂಗವನ್ನು ಒಂದು ವೃತ್ತಿಯನ್ನಾಗಿ ಸ್ವೀಕರಿಸಬೇಕೆಂದು ಬಯಸುವ ಯುವ ಕಲಾವಿದರಿಗೆ ಸ್ಫೂರ್ತಿಯಾಗಿದ್ದಾರೆ. ಇವರ ಕೊನೆಯ ಪುತ್ರರಾದ ಪುನೀತ್ ರಾಜ್‌ಕುಮಾರ್‌ರವರು ಹುಟ್ಟಿದ ಆರು ತಿಂಗಳಿನಲ್ಲಿಯೇ 'ಪ್ರೇಮದ ಕಾಣಿಕೆ' ಚಿತ್ರದ ಮೂಲಕ ತಮ್ಮ ತಂದೆಯೊಂದಿಗೆ ಕನ್ನಡ ಸಿನೆಮಾರಂಗಕ್ಕೆ ಬಾಲನಟರಾಗಿ ಪ್ರವೇಶಿಸಿದವರು. ಬಾಲ್ಯದಲ್ಲಿಯೇ ಹಲವಾರು ಅವಕಾಶಗಳು ಅವರನ್ನರಸಿಕೊಂಡು ಬಂದವು. ಅವರೇ ಹೇಳಿಕೊಂಡಂತೆ ಬಾಲ್ಯದಲ್ಲಿ ನಟನೆಯ ಬಗ್ಗೆ ಅಷ್ಟೇನೂ ಆಸಕ್ತಿಯಿಲ್ಲದಿದ್ದರೂ, ನಿರ್ದೇಶಕರು ಹೇಳಿಕೊಟ್ಟಿದ್ದನ್ನು ಶ್ರದ್ಧೆಯಿಂದ ಕಲಿಯುವ, ಅದರಂತೆ ಅಭಿನಯಿಸುವ ಮನೋಭಾವವನ್ನು ಹೊಂದಿದ್ದ ಅವರು ಯಾವುದೇ ಪಾತ್ರದಲ್ಲಿ ನಟಿಸುವುದಕ್ಕಿಂತ, ಆ ಪಾತ್ರದಲ್ಲಿ ಜೀವಿಸಲು ಹೆಚ್ಚು ಇಷ್ಟ ಪಡುತ್ತಿದ್ದರು. ಕೋಷ್ಠಕ 1 ರಲ್ಲಿ ಪುನೀತ್‌ರವರು ಬಾಲನಟರಾಗಿ ಅಭಿನಯಿಸಿದ ಚಿತ್ರಗಳ ಪಟ್ಟಿಯನ್ನು ನಮೂದಿಸಲಾಗಿದೆ.

**ಕೋಷ್ಠಕ–1 ಬಾಲನಟನಾಗಿ ಅಪ್ಪುರವರು ಅಭಿನಯಿಸಿದ ಚಿತ್ರಗಳ ಪಟ್ಟಿ**

| ಕ್ರ.ಸಂ. | ಸಿನೆಮಾ ಹೆಸರು | ತೆರೆ ಕಂಡ ವರ್ಷ |
|---|---|---|
| 1. | ಪ್ರೇಮದ ಕಾಣಿಕೆ | 1976 |
| 2. | ಸನಾದಿ ಅಪ್ಪಣ್ಣ | 1977 |
| 3. | ತಾಯಿಗೆ ತಕ್ಕ ಮಗ | 1978 |
| 4. | ವಸಂತ ಗೀತೆ | 1980 |
| 5. | ಭೂಮಿಗೆ ಬಂದ ಭಗವಂತ | 1981 |
| 6. | ಭಾಗ್ಯವಂತ | 1981 |
| 7. | ಹೊಸ ಬೆಳಕು | 1982 |
| 8. | ಚಲಿಸುವ ಮೋಡಗಳು | 1982 |
| 9. | ಭಕ್ತ ಪ್ರಹ್ಲಾದ | 1983 |
| 10. | ಎರಡು ನಕ್ಷತ್ರಗಳು | 1983 |
| 11. | ಯಾರಿವನು? | 1984 |
| 12. | ಬೆಟ್ಟದ ಹೂವು | 1985 |
| 13. | ಶಿವ ಮೆಚ್ಚಿದ ಕಣ್ಣಪ್ಪ | 1988 |
| 14. | ಪರಶುರಾಮ | 1988 |

ಈ ಮೇಲಿನ ಪಟ್ಟಿಯಲ್ಲಿನ ಎಲ್ಲಾ ಸಿನಿಮಾಗಳು ಅವರ ಕಲಾಜೀವನವನ್ನು ನಮ್ಮೆದುರು ತಂದಿರಿಸುತ್ತದೆ. ಬಾಲನಟರಾಗಿ ಒಂದಷ್ಟು ಚಿತ್ರಗಳಲ್ಲಿ ಕಾಣಿಸಿಕೊಂಡ ಇವರು 'ಬೆಟ್ಟದ ಹೂವು' ಚಿತ್ರದಲ್ಲಿನ ತಮ್ಮ ಮನೋಜ್ಞ ಅಭಿನಯಕ್ಕಾಗಿ ರಾಷ್ಟ್ರಪ್ರಶಸ್ತಿಯನ್ನು ಪಡೆದುಕೊಂಡರು. ಅಲ್ಲದೇ 'ಚಲಿಸುವ ಮೋಡಗಳು'

ಹಾಗೂ 'ಎರಡು ನಕ್ಷತ್ರಗಳು' ಸಿನಿಮಾಗಳಲ್ಲಿನ ಅಭಿನಯಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದ 'ಅತ್ಯುತ್ತಮ ಬಾಲನಟ' ಪ್ರಶಸ್ತಿಯನ್ನು ಪಡೆದರು. ಆ ನಂತರ ಹಲವು ಸಿನಿಮಾಗಳಲ್ಲಿ ನಟಿಸಿ, ಕೆಲ ವರ್ಷಗಳ ಕಾಲ ಚಿತ್ರರಂಗದಿಂದ ದೂರವುಳಿದರು.

ತದನಂತರ ಯಾವುದೇ ಸಿನಿಮಾಗಳ ತೆರೆಯಲ್ಲಿ ಕಾಣಿಸಿಕೊಳ್ಳದೇ, ಚಿತ್ರರಂಗದಿಂದ ಚಿಕ್ಕದೊಂದು ವಿರಾಮ ತೆಗೆದುಕೊಂಡರು. ಆದರೆ ಈ ಅವಧಿಯಲ್ಲಿ ತಮ್ಮನ್ನು ಸಿನಿಮಾ ನಿರ್ಮಾಣ, ಮತ್ತಿತರೆ ವ್ಯವಹಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡರು. ನಂತರ 2002ರಲ್ಲಿ 'ಅಪ್ಪು' ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕ ನಟರಾಗಿ ಕಾಣಿಸಿಕೊಂಡರು. ಪಾತ್ರ ಯಾವುದೇ ಇರಲಿ, ಅದರಲ್ಲಿ ಸಂಪೂರ್ಣರಾಗಿ ತೊಡಗಿಸಿಕೊಂಡ ಅವರು, ಅಭಿನಯ ಕ್ಷೇತ್ರದಲ್ಲಿ ಮತ್ತೆ ಹಿಂತಿರುಗಿ ನೋಡಲೇ ಇಲ್ಲ. ನಟಿಸುವುದಷ್ಟೇ ಅಲ್ಲದೇ, ವಿವಿಧ ಯುವ ನಿರ್ದೇಶಕರ, ಯುವ ನಾಯಕರುಗಳ ಚಿತ್ರಗಳಿಗೂ ಪ್ರೋತ್ಸಾಹ ನೀಡುತ್ತಾ, ಹಲವಾರು ಹೊಸ ಪ್ರತಿಭೆಗಳಿಗೆ ಸಿನಿಜೀವನದಲ್ಲಿ ಅವಕಾಶ ದೊರಕಿಸಿಕೊಟ್ಟರು. ಅವರ ನಟನೆಗೆ ರಾಜ್ಯಪ್ರಶಸ್ತಿ, ಸೈಮಾ ಪ್ರಶಸ್ತಿ, ಹಲವಾರು ಫಿಲಂ ಫೇರ್ ಪ್ರಶಸ್ತಿಗಳು ಅವರನ್ನರಸಿಕೊಂಡು ಬಂದವು. ಇವುಗಳಲ್ಲದೇ ರಾಜ್ಯದಾದ್ಯಂತ ಹಲವಾರು ಸಂಘ–ಸಂಸ್ಥೆಗಳು ಅವರನ್ನು ಗೌರವಿಸಿದೆ. ಕೋಷ್ಟಕ–2ರಲ್ಲಿ ಪುನೀತ್‌ರವರು, ನಾಯಕ ಹಾಗೂ ಗೌರವನಟರಾಗಿ ಅಭಿನಯಿಸಿದ ಚಿತ್ರಗಳ ಪಟ್ಟಿಯನ್ನು ನಮೂದಿಸಿಲಾಗಿದೆ.

**ಕೋಷ್ಟಕ–2 ನಾಯಕ ಹಾಗೂ ಗೌರವನಟರಾಗಿ ಅಪ್ಪುರವರು ಅಭಿನಯಿಸಿದ ಚಿತ್ರಗಳ ಪಟ್ಟಿ**

| **ಕ್ರ.ಸಂ.** | **ಸಿನೆಮಾ ಹೆಸರು** | **ತೆರೆ ಕಂಡ ವರ್ಷ** |
|---|---|---|
| 1. | ಅಪ್ಪು | 2002 |
| 2. | ಅಭಿ | 2003 |
| 3. | ವೀರ ಕನ್ನಡಿಗ | 2004 |
| 4. | ಮೌರ್ಯ | 2004 |
| 5. | ಆಕಾಶ್ | 2005 |
| 6. | ನಮ್ಮ ಬಸವ | 2005 |
| 7. | ಅಜಯ್ | 2006 |
| 8. | ಅರಸು | 2007 |
| 9. | ಮಿಲನ | 2007 |
| 10 | ಬಿಂದಾಸ್ | 2008 |
| 11. | ವಂಶಿ | 2008 |
| 12. | ರಾಜ್–ದಿ ಶೋ ಮ್ಯಾನ್ | 2009 |

| | | |
|---|---|---|
| 13. | ರಾಮ್ | 2009 |
| 14. | ಪೃಥ್ವಿ | 2010 |
| 15. | ಜಾಕಿ | 2010 |
| 16. | ಹುಡುಗರು | 2011 |
| 17. | ಪರಮಾತ್ಮ | 2011 |
| 18. | ಅಣ್ಣಾಬಾಂಡ್ | 2012 |
| 19. | ಯಾರೇ ಕೂಗಾಡಲೀ | 2012 |
| 20. | ನಿನ್ನಿಂದಲೇ | 2014 |
| 21. | ಪವರ್ | 2014 |
| 22. | ಮೈತ್ರಿ | 2015 |
| 23. | ರಣವಿಕ್ರಮ | 2015 |
| 24. | ಚಕ್ರವ್ಯೂಹ | 2016 |
| 25. | ದೊಡ್ಮನೆ ಹುಡ್ಗ | 2016 |
| 26. | ರಾಜಕುಮಾರ | 2017 |
| 27. | ಅಂಜನೀಪುತ್ರ | 2017 |
| 28. | ಹಂಬಲ್ ಪೊಲಿಟಿಷಿಯನ್ನಾಗರಾಜ್ | 2018 |
| 29. | ನಟಸಾರ್ವಭೌಮ | 2019 |
| 30. | ಪಡ್ಡೆಹುಲಿ | 2019 |
| 31. | ಮಾಯಾಬಜಾರ್ | 2020 |
| 32. | ಯುವರತ್ನ | 2021 |
| 33. | ಜೇಮ್ಸ್ | 2022 |
| 34. | ಗಂಧದ ಗುಡಿ(ಸಾಕ್ಷ್ಯ ಚಿತ್ರ) | 2021 |

**ಪವರ್ ಸ್ಟಾರ್**

ಪುನೀತ್‌ರವರು ತಮ್ಮ ನಟನೆಯ ಮೂಲಕ ಕನ್ನಡ ಚಿತ್ರರಂಗದಲ್ಲಿ ಪ್ರಸಿದ್ಧರಾಗಿದ್ದಾರೆ. ಇದೇ ಕಾರಣಕ್ಕಾಗಿ ಅಭಿಮಾನಿಗಳಿಂದ 'ಪವರ್ ಸ್ಟಾರ್' ಎಂಬ ಹೆಸರನ್ನು ಪಡೆದಿದ್ದಾರೆ. ಹೆಸರಿಗೆ ತಕ್ಕಂತೆ ತಮ್ಮದೇ

ವಿಶಿಷ್ಟ ಶೈಲಿಯ ನಟನೆ, ಡೈಲಾಗ್ ಡೆಲಿವರಿ, ಬಾಡಿ ಲಾಂಗ್ವೇಜ್, ಮ್ಯಾನರಿಸಂ, ನೃತ್ಯ, ಹಿನ್ನೆಲೆಗಾಯನ, ಸ್ಟಂಟ್, ಹೀಗೆ ಸಿನಿಮಾದ ವಿವಿಧ ವಲಯಗಳಲ್ಲಿ ತೊಡಗಿಸಿಕೊಂಡು ಅಭಿಮಾನಿಗಳ ಪ್ರೀತಿ ಸಂಪಾದಿಸಿದವರು. ಯಾವುದೇ ವಯಸ್ಸಿನ ಬೇಧವಿಲ್ಲದೇ ತಮ್ಮ ಸರಳ ವ್ಯಕ್ತಿತ್ವದ ಮೂಲಕ ಸಾರ್ವಜನಿಕ ಬದುಕಿನಲ್ಲಿಯೂ ಮುಕ್ತವಾಗಿ ಬೆರೆಯುತ್ತಿದ್ದುದ್ದರಿಂದ ದೇಶ–ವಿದೇಶಗಳಲ್ಲಿಯೂ ಅಸಂಖ್ಯಾತ ಅಭಿಮಾನಿ ಬಳಗವನ್ನು ಹೊಂದಿದ್ದರು.

**ಹಿನ್ನೆಲೆ ಗಾಯಕರಾಗಿ**

ಡಾ.ರಾಜ್‌ಕುಮಾರ್‌ರಂತೆಯೇ, ಪುನೀತ್‌ರವರು ಕೂಡ ಹಿನ್ನೆಲೆ ಗಾಯಕರಾಗಿ ಸಾಕಷ್ಟು ಜನಪ್ರಿಯತೆಯನ್ನು ಹೊಂದಿದ್ದರು. ವಿಭಿನ್ನ ಧ್ವನಿ, ಭಾಷೆಯ ಮೇಲಿನ ಸ್ಪಷ್ಟ ಉಚ್ಛಾರದಿಂದಾಗಿ, ನಟನೆಯಷ್ಟೇ ಗಾಯನಕ್ಕೂ ಬೇಡಿಕೆಯನ್ನು ಹೊಂದಿದ್ದರು. ಬಾಲನಟನಾಗಿ 10ಕ್ಕೂ ಹೆಚ್ಚು ಸಿನಿಮಾಗಳು (ಕೋಷ್ಟಕ–1) ಹಾಗೂ ನಾಯಕನಟರಾದ ಮೇಲೆ 30ಕ್ಕೂ ಹೆಚ್ಚು ಸಿನಿಮಾಗಳಲ್ಲಿ(ಕೋಷ್ಟಕ–2) ನಟಿಸಿ ಸುಮಾರು 80ಕ್ಕೂ ಹೆಚ್ಚು ಹಾಡುಗಳಿಗೆ ತಮ್ಮ ದನಿಯನ್ನು ನೀಡಿದ್ದಾರೆ. ತಮ್ಮ ಅಭಿನಯದ ಚಿತ್ರಗಳನ್ನು ಹೊರತುಪಡಿಸಿ, ಸಾಕಷ್ಟು ಯುವ ಪ್ರತಿಭೆಗಳ ಸಿನಿಮಾಗಳಿಗಾಗಿಯೂ ಅವರು ಹಾಡಿದ್ದಾರೆನ್ನುವುದೇ ಒಂದು ವಿಶೇಷ. ಅದರಲ್ಲೂ ಬಾಲ್ಯದಲ್ಲಿ ಹೆಚ್ಚು ಜನಪ್ರಿಯವಾಗಿದ್ದ ಪ್ರಮುಖವಾದ ಹಾಡುಗಳೆಂದರೆ,

ಭಾಗ್ಯವಂತ ಸಿನಿಮಾದ *"ಬಾನ ದಾರಿಯಲ್ಲಿ ಸೂರ್ಯ ಜಾರಿ ಹೋದ"*

ಚಲಿಸುವ ಮೋಡಗಳು ಚಿತ್ರದ *"ಕಾಣದಂತೆ ಮಾಯವಾದನೋ"*

ಈ ಎರಡೂ ಹಾಡುಗಳನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಏಕೆಂದರೆ ಈ ಹಾಡುಗಳು ಬಾಲ್ಯದಿಂದಲೇ ಅವರೊಳಗಿದ್ದ ಹಾಡುಗಾರನೊಬ್ಬನ ಪರಿಚಯವನ್ನು ನೀಡುತ್ತದೆ. ಇವುಗಳಲ್ಲದೇ ನಾಯಕ ನಟರಾಗಿ ವೃತ್ತಿ ಜೀವನ ಆರಂಭಿಸಿದ ಮೇಲೆ ಅಪ್ಪು, ಅಕಿರಾ, ಚೌಕ, ರಾಮ್, ಉಪ್ಪು ಹುಳಿ ಖಾರ, ಕೃಷ್ಣ ರುಕ್ಮಿಣಿ, ಜೈ ಮಾರುತಿ, ರಾಮ್ ಲೀಲಾ ಇತ್ಯಾದಿ ಚಿತ್ರಗಳಲ್ಲಿ ತಮ್ಮ ಪಾತ್ರಗಳಿಗಲ್ಲದೇ ಬೇರೆ ಬೇರೆ ನಾಯಕರುಗಳ ಚಿತ್ರಗಳಿಗಾಗಿಯೂ ಹಾಡಿದ್ದಾರೆ. ಇವುಗಳಲ್ಲದೇ, ಹಲವಾರು ಯುವ ಪ್ರತಿಭೆಗಳ ಚಲನಚಿತ್ರಗಳಿಗೆ ಪ್ರೋತ್ಸಾಹಿಸುವ ಸಲುವಾಗಿ ಬೇರೆ ನಾಯಕರುಗಳ ಚಿತ್ರಗಳಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ತಾವು ಧ್ವನಿ ನೀಡಿದ ಹಾಡಿನ ಮೂಲಕ ಬಂದ ಹಣಕಾಸನ್ನು 'ಶಕ್ತಿಧಾಮ' ಹಾಗೂ ಇನ್ನಿತರೆ ನಿರ್ಗತಿಕ ಆಶ್ರಯ ಸಂಸ್ಥೆಗಳಿಗಾಗಿ ವಿನಿಯೋಗಿಸುತ್ತಿದ್ದರು.

**ನಿರೂಪಕರಾಗಿ**

ಪುನೀತ್‌ರವರು ಬೆಳ್ಳಿತೆರೆಯಷ್ಟೇ ಮಹತ್ವವನ್ನು ಕಿರುತೆರೆಗೂ ನೀಡುತ್ತಿದ್ದರು. ಜನಪ್ರಿಯ ಕನ್ನಡದ ರಿಯಾಲಿಟಿ ಶೋಗಳಾದ 'ಕನ್ನಡದ ಕೋಟ್ಯಾಧಿಪತಿ', 'ಫ್ಯಾಮಿಲಿ ಪವರ್'ಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದರು. ಈ ಮೂಲಕ ಕಿರುತೆರೆಯ ಸಹಸ್ರಾರು ಅಭಿಮಾನಿಗಳ ಮನೆ–ಮನಗಳನ್ನು ತಲುಪಿದ್ದರು. ಇವೆಲ್ಲಾ ಕಾರ್ಯಕ್ರಮವು ಮೂಲತಃ ಮನೋರಂಜನೆಯ ಉದ್ದೇಶವನ್ನು ಹೊಂದಿದ್ದರೂ, ಹಲವಾರು ಸಾಮಾಜಿಕ ಸದುದ್ದೇಶಗಳಿಗಾಗಿಯೂ ವೇದಿಕೆಯನ್ನು ನೀಡುತ್ತಿದ್ದವು ಎಂಬುದು ಇದರ ವಿಶೇಷ. ಅಲ್ಲದೇ,

ಇವುಗಳ ಮೂಲಕ ದೊರೆಯುತ್ತಿದ್ದ ಸಂಭಾವನೆಯನ್ನು ನಿರ್ಗತಿಕರಿಗಾಗಿ, ಶಿಕ್ಷಣಕ್ಕೆ, ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ವಿನಿಯೋಗಿಸುತ್ತಿದ್ದರು.

**ಸಾರ್ವಜನಿಕ ಸೇವೆಯ ಬದುಕು**

ನಟನೆ, ಸಿನಿಮಾ ನಿರ್ಮಾಣ ಇದನ್ನು ವೃತ್ತಿಯನ್ನಾಗಿಸಿಕೊಂಡಿದ್ದ ಪುನೀತ್, ತಮ್ಮ ದಿನನಿತ್ಯ ಬದುಕಿನ ಒಂದಷ್ಟು ಸಮಯವನ್ನು ಸಾರ್ವಜನಿಕ ಸೇವೆಗಾಗಿಯು ಮುಡಿಪಾಗಿಟ್ಟಿದ್ದರು. ವಿಶೇಷವಾಗಿ ಕರ್ನಾಟಕ ಸರ್ಕಾರದ ಪ್ರಾಯೋಜಕತ್ವದ ವಿವಿಧ ಪ್ರಚಾರ ಕಾರ್ಯಗಳಲ್ಲಿಯೂ ಭಾಗವಹಿಸಿದ್ದರು. ಶಿಕ್ಷಣ, ಶಿಕ್ಷಣದ ಹಕ್ಕು, ಪರಿಸರ ಸಂರಕ್ಷಣೆ, ಚುನಾವಣೆ, ಆರೋಗ್ಯ, ಇಂಧನ ಬಳಕೆಯ ಕುರಿತಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಮುಂತಾದವುಗಳಲ್ಲಿ ಅವರು ಭಾಗವಹಿಸಿದ್ದರು. ಸಾರ್ವಜನಿಕ ಕ್ಷೇತ್ರದ ಈ ಯಾವುದೇ ಕಾರ್ಯಗಳಿಗಾಗಿ ಅವರು ಯಾವುದೇ ಹಣವನ್ನು ಪಡೆಯುತ್ತಿರಲಿಲ್ಲ.

**ರಾಯಭಾರಿಯಾಗಿ**

- ಪುನೀತ್‌ರವರು ಹಲವಾರು ಸರಕುಗಳು ಹಾಗೂ ಉತ್ಪನ್ನಗಳ ರಾಯಭಾರಿಯಾಗಿಯು ತಮ್ಮನ್ನು ತಾವು ಗುರುತಿಸಿಕೊಂಡಿದ್ದರು. ದಕ್ಷಿಣ ಭಾರತದ ಖ್ಯಾತ ಹಾಲು ಉತ್ಪಾದಕ ಸಂಸ್ಥೆ ಕೆ.ಎಂ.ಎಫ್ ನಂದಿನಿಯ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದರು.
- 2018ರ ವಿಧಾನಸಭಾ ಚುನಾವಣಾ ವೇಳೆಯಲ್ಲಿ ರಾಜ್ಯ ಚುನಾವಣಾ ಆಯೋಗದ ಐಕಾನ್/ರಾಯಭಾರಿಯಾಗಿ ಆಯ್ಕೆಯಾಗಿದ್ದರು. ಮತದಾನದ ಕುರಿತಾದ ಸಾರ್ವಜನಿಕ ಜಾಗೃತಿ ಹಾಗೂ ಯುವ ಮತದಾರರನ್ನು ಸೆಳೆಯಲು ಹಲವಾರು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. 'ಒಳಗೊಳ್ಳುವ ಸುಗಮ ಮತ್ತು ನೈತಿಕ ಚುನಾವಣೆ', 'ನಮ್ಮ ಓಟು; ನಮ್ಮ ಪವರ್' ಎಂಬ ಘೋಷಣೆಗಳ ಮೂಲಕ ಚುನಾವಣೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನು ಮೂಡಿಸಿದ್ದರು.
- ತಮ್ಮ ಕುಟುಂಬದ ನಿರ್ವಹಣೆಯಲ್ಲಿರುವ 'ರಾಜ್ ಫೌಂಡೇಷನ್'ನಿಂದ ಸಮಾಜಮುಖಿ ಕೆಲಸಗಳು, ವಿಶೇಷವಾಗಿ ಶಿಕ್ಷಣಕ್ಕೆ ಬೆಂಬಲ ಮತ್ತು ಪ್ರೋತ್ಸಾಹ ನೀಡುತ್ತಿದ್ದರು.
- ತಮ್ಮ ಸಹಾಯದ ಮೂಲಕ ಹಲವಾರು ಉಚಿತ ಶಸ್ತ್ರಚಿಕಿತ್ಸೆಗಳು, ಆರೋಗ್ಯದ ತಪಾಸಣೆ ಮುಂತಾದ ಆರೋಗ್ಯ ಸಂಬಂಧಿ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಿದ್ದರು.
- ದೀಪಾವಳಿ ಹಬ್ಬದ ಸಂದರ್ಭದಲ್ಲಿ ಶಬ್ಧಮಾಲಿನ್ಯ, ವಾಯು ಮಾಲಿನ್ಯವನ್ನು ಗಮನದಲ್ಲಿಟ್ಟುಕೊಂಡು ಪರಿಸರ ಮಾಲಿನ್ಯದ ಸಂರಕ್ಷಣೆಗೂ, ಕೈ ಜೋಡಿಸಿದ್ದರು. 'ಪಟಾಕಿ ಸಿಡಿಸಬೇಡಿ, ಪಟಾಕಿಯ ಬದಲು ನಮ್ಮ ದೇಹದಲ್ಲಿನ ಕ್ಯಾಲರಿಯನ್ನು ಸುಡೋಣ..ದೀಪಾವಳಿ ಎಲ್ಲರ ಬಾಳಿನಲ್ಲಿ ಬೆಳಕು ತರಲಿ' ಎಂಬ ಸಾರ್ವಜನಿಕ ಕಳಕಳಿಯ ಸಂದೇಶದ ಮೂಲಕ ಜನ ಜಾಗೃತಿ ಕೈಗೊಂಡಿದ್ದರು.
- ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಬಡವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಅವಕಾಶ ದೊರಕಿಸಿಕೊಡುವಲ್ಲಿ ಸರ್ಕಾರದ ಆರ್.ಟಿ.ಇ. (ರೈಟ್ ಟು ಎಜುಕೇಷನ್) ಕಾಯ್ದೆಯು ಪ್ರಮುಖವಾದುದು. ಅದಕ್ಕಾಗಿ 2013ರಲ್ಲಿ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಪ್ರಚಾರ ರಾಯಭಾರಿಯಾಗಿ ಆಯ್ಕೆಗೊಂಡು, ಖ್ಯಾತ ಚಿತ್ರನಟಿ ರಾಧಿಕಾ ಪಂಡಿತ್‌ರವರೊಂದಿಗೆ ಒಡಗೂಡಿ ಶಿಕ್ಷಣದ ಹಕ್ಕಿನ ಕುರಿತಂತೆ ಜನರಲ್ಲಿ ಅರಿವು ಮೂಡಿಸಿದ್ದರು.

- ಸರ್ವಶಿಕ್ಷಣ ಅಭಿಯಾನ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಪೋಷಕರಲ್ಲಿ ಜಾಗೃತಿ ಮೂಡಿಸಿದ್ದರು. ಮಕ್ಕಳು ಶಾಲೆ ಬಿಟ್ಟು ಹೋಗದಂತೆ, ತಮ್ಮ ಶೈಕ್ಷಣಿಕ ಹಕ್ಕಿನ ಅವಕಾಶವನ್ನು ಕಳೆದುಕೊಳ್ಳದಂತೆ ತಂದೆ ತಾಯಂದಿರು ತೆಗೆದುಕೊಳ್ಳಬೇಕಾದ ಜವಾಬ್ದಾರಿಗಳು ಹಾಗೂ ಶಾಲೆಯಿಂದ ವಿದ್ಯಾರ್ಥಿಗಳ ಹೊರಗುಳಿಯುವಿಕೆಯ ದರವನ್ನು ತಗ್ಗಿಸಲು ಅರಿವು ಮೂಡಿಸಿದ್ದರು.
- ತಮ್ಮ ಸಂಸ್ಥೆಗಳ ಮೂಲಕ ಕೆಲವು ಕನ್ನಡ ಶಾಲೆಗಳನ್ನು ದತ್ತು ತೆಗೆದುಕೊಂಡು ಅವುಗಳ ಅಭಿವೃದ್ಧಿಯಲ್ಲಿ ಶ್ರಮಿಸಿದ್ದರು.
- ಕರ್ನಾಟಕ ಸರ್ಕಾರದ ಪರವಾಗಿ ಎಲ್.ಇ.ಡಿ.ಬಲ್ಬ್‌ಗಳ ಬಳಕೆಯ ಕುರಿತಾದ ಪ್ರಚಾರದಲ್ಲಿಯೂ ಭಾಗವಹಿಸಿದ್ದರು. ಇಂಧನ ಇಲಾಖೆಯ ಈ ಪ್ರಚಾರ ಕಾರ್ಯಕ್ರಮಕ್ಕೆ ಖ್ಯಾತ ಚಿತ್ರನಟಿ ರಮ್ಯಾರವರು ಪಾಲುದಾರರಾಗಿದ್ದು, 'ಹೊಸಬೆಳಕು – ಬದಲಾವಣೆಯ ಸಮಯ' ಎಂಬ ಪರಿಕಲ್ಪನೆಯಡಿಯಲ್ಲಿ ಕಡಿಮೆ ವಿದ್ಯುತ್ತಿನ ಬಳಕೆಯ ಬಗ್ಗೆ ಅರಿವು ಮೂಡಿಸಲಾಗುತ್ತಿತ್ತು.
- ಬೆಸ್ಕಾಂ (ಬೆಂಗಳೂರು ಎಲೆಕ್ಟ್ರಿಸಿಟಿ ಸಪ್ಲೈ ಕಂಪೆನಿ/ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ)ನ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದ್ದರು.
- ರಾಜ್‌ಕುಮಾರ್ ಅಕಾಡೆಮಿಯ ಮೂಲಕ, ತಮ್ಮ ಕುಟುಂಬದ ಸದಸ್ಯರೊಂದಿಗೆ ಸೇರಿ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಬಡ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ವ್ಯವಸ್ಥೆ.
- 2019ರಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ(ಬಿ.ಎಂ.ಟಿ.ಸಿ.) ರಾಯಭಾರಿಯಾಗಿದ್ದರು. ಈ ಮೂಲಕ ಹೆಚ್ಚು ಸಾರ್ವಜನಿಕ ಸಾರಿಗೆಯನ್ನು ಬಳಸಲು ಜನರನ್ನು ಉತ್ತೇಜಿಸಿದ್ದರು. ಅಲ್ಲದೇ ಇದೇ ಅಭಿಯಾನದಲ್ಲಿ ಬಸ್ ಆದ್ಯತಾ ಲೇನ್, ಕಡಿಮೆ ಟ್ರಾಫಿಕ್ ಡೇ ಹಾಗೂ ಮಹಿಳೆಯರಿಗೆ ಕಿರುಕುಳದ ವಿರುದ್ಧದ ಜಾಗೃತಿಯನ್ನು ನಡೆಸಿದ್ದರು.
- ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದಾದ್ಯಂತ ಮಳೆ, ಪ್ರವಾಹ, ಭೂಕುಸಿತ, ಬರಗಾಲಗಳಂತಹ ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಅಲ್ಲಿನ ಜನರಿಗೆ ನೆರವಾದರು.
- 2019ರ ಕೋವಿಡ್–19 ಸಾಂಕ್ರಾಮಿಕ ಸಮಸ್ಯೆಯ ಕಾಲಘಟ್ಟದಲ್ಲಿ ರಾಜ್ಯದ 'ಮುಖ್ಯಮಂತ್ರಿ ಪರಿಹಾರ ನಿಧಿ'ಗೆ 50 ಲಕ್ಷದ ಆರ್ಥಿಕ ಸಹಾಯವನ್ನು ನೀಡಿದ್ದರು.
- ಕೋವಿಡ್ ಅವಧಿಯಲ್ಲಿ ಕನ್ನಡ ಚಿತ್ರರಗದ ಕಾರ್ಮಿಕ ವರ್ಗ ಮತ್ತು ಅವರ ಕುಟುಂಬಗಳಿಗೂ ಹಣಕಾಸಿನ ನೆರವಿನ ಜೊತೆಗೆ, ದಿನನಿತ್ಯ ಬಳಕೆಯ ದಿನಸಿ ಇನ್ನಿತರೆ ಸರಕುಗಳನ್ನು ಒದಗಿಸಿದ್ದರು.
- ಕರ್ನಾಟಕ ಸರ್ಕಾರದ ಸ್ಕಿಲ್ ಡೆವಲಪ್‌ಮೆಂಟ್ ಬೋರ್ಡಿನ ರಾಯಭಾರಿಯಾಗಿ, ಅದರ ಕಾರ್ಯಕ್ರಮಗಳ ಕುರಿತು ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದ್ದರು.
- ಕಾವೇರಿ ವಿವಾದ, ಹೊಗೇನಕಲ್, ಮಹಾದಾಯಿ ಮೊದಲಾದ ಕನ್ನಡನಾಡು ನುಡಿಯ ರಕ್ಷಣೆಯ ಕುರಿತಾದ ಚಳುವಳಿಗಳಲ್ಲಿ ಭಾಗವಹಿಸಿದ್ದರು.
- ಅರಣ್ಯಗಳು, ವನ್ಯಪ್ರಾಣಿಗಳು, ಪರಿಸರ ಸಂರಕ್ಷಣೆಯ ವಿವಿಧ ಚಟುವಟಿಕೆಗಳಲ್ಲಿ 'ಗಂಧದ ಗುಡಿ' ಸಾಕ್ಷ್ಯ ಚಿತ್ರದ ಮೂಲಕ ತಮ್ಮನ್ನು ತೊಡಗಿಸಿಕೊಂಡಿದ್ದರು.

- ಸಿನಿಮಾರಂಗದಲ್ಲಿ ಹಲವಾರು ಹೊಸ ಪ್ರತಿಭೆಗಳ ನಟನೆ, ನಿರ್ದೇಶನವನ್ನು ಪ್ರೋತ್ಸಾಹಿಸಲು ತಮ್ಮ ಪಿ.ಆರ್.ಕೆ. ನಿರ್ಮಾಣ ಸಂಸ್ಥೆಯ ಮೂಲಕ 'ಲಾ', 'ಫ್ರೆಂಚ್ ಬಿರಿಯಾನಿ', 'ಕವಲುದಾರಿ', 'ಮಾಯಾ ಬಜಾರ್', 'ಒನ್ ಕಟ್ ಟು ಕಟ್' ಮೊದಲಾದ ಸಿನಿಮಾಗಳ ನಿರ್ಮಾಣವನ್ನು ಮಾಡಲಾಗಿತ್ತು.
- ಐ.ಪಿ.ಎಲ್. (ಇಂಡಿಯನ್ ಪ್ರೀಮಿಯರ್ ಲೀಗ್) ಕ್ರಿಕೆಟ್‌ನಲ್ಲಿ ಆರ್.ಸಿ.ಬಿ.(ರಾಯಲ್ ಚಾಲೆಂಜರ್ಸ್ ಬೆಂಗಳೂರು)ತಂಡದ ಪ್ರಚಾರ ರಾಯಭಾರಿಯಾಗಿದ್ದರು.

**ಶಕ್ತಿಧಾಮ**

ಸಿನಿಮಾರಂಗದ ಚಟುವಟಿಕೆ ಮಾತ್ರವಲ್ಲದೇ, ಮೈಸೂರಿನಲ್ಲಿ 'ಶಕ್ತಿಧಾಮ'ದ ಮೂಲಕವೂ, ಅಪ್ಪು ತಮ್ಮ ಸಾಮಾಜಿಕ ಸೇವೆಗಳನ್ನು ಮುಂದುವರೆಸಿದ್ದರು. 1997ರಿಂದಲೇ ಸಮಾಜದ ನಿರ್ಗತಿಕ ಹಾಗೂ ಬಡ ಹೆಣ್ಣು ಮಕ್ಕಳ ರಕ್ಷಣೆ ಮತ್ತು ವಿದ್ಯಾಭ್ಯಾಸಕ್ಕಾಗಿ ಇದರ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು. ಈ ಹೊಣೆಗಾರಿಕೆಯ ಮೂಲಕ ಸಾವಿರಾರು ನಿರ್ಗತಿಕ ಹಾಗೂ ಬಡ ಹೆಣ್ಣುಮಕ್ಕಳ ವಸತಿ ಮತ್ತು ವಿದ್ಯಾಭ್ಯಾಸಕ್ಕೆ ನೆರವಾದರು. ಅಪ್ಪುರವರ ನಿಧನದ ನಂತರ ತಮಿಳಿನ ಖ್ಯಾತ ಚಿತ್ರನಟ 'ವಿಶಾಲ್'ರವರು ರಾಜ್ ಕುಟುಂಬದ ಅನುಮತಿಯೊಂದಿಗೆ 'ಶಕ್ತಿಧಾಮ'ದ ಕಾರ್ಯ ಚಟುವಟಿಕೆಗಳನ್ನು ತಾವು ಮುಂದುವರೆಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಈ ಸಣ್ಣ ಅಂಶವೇ, ಅವರ ಜೀವನದ ಮೌಲ್ಯಗಳನ್ನು ಯುವಜನತೆಯು ಅನುಸರಿಸಲು ಬಯಸುತ್ತಾರೆನ್ನುವುದಕ್ಕೆ ಉತ್ತಮ ನಿದರ್ಶನವಾಗಿದೆ. ಶಕ್ತಿಧಾಮ ಮಾತ್ರವಲ್ಲದೇ 26 ಅನಾಥಾಶ್ರಮಗಳು, 16 ವೃದ್ಧಾಶ್ರಮಗಳು ಹಾಗೂ 19 ಗೋಶಾಲೆಗಳ ಜವಾಬ್ದಾರಿಯನ್ನು ಪುನೀತ್‌ರವರು ತಮ್ಮ ಸ್ವಂತ ಹಣದಿಂದ ನಿರ್ವಹಿಸುತ್ತಿದ್ದರು.

**ನೇತ್ರದಾನ**

ತಮ್ಮ ಸಾವಿನ ನಂತರವೂ ನೇತ್ರದಾನದ ಮೂಲಕ ಸಾರ್ಥಕತೆ ಮೆರೆದ ಪುನೀತ್‌ರವರ ಈ ಕಾರ್ಯವು ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ. ಕೊರೋನಾ ಕಾರಣದಿಂದಾಗಿ ನೇತ್ರದಾನಕ್ಕೆ ಎದುರಾಗಿದ್ದ ಅಡ್ಡಿ ಆತಂಕಗಳು ಕಳೆದು, ಮತ್ತೆ ಇಂತಹ ಚಟುವಟಿಕೆಗಳು ಮರುಚಾಲನೆ ಪಡೆಯುವಂತಾಯಿತು. ತಮ್ಮ ನೆಚ್ಚಿನ ನಟನ ಹಾದಿಯಲ್ಲೇ ಮುಂದುವರೆಯಲು ಸಾಕಷ್ಟು ಯುವಜನರು ಈ ಅವಧಿಯಲ್ಲಿ ನೇತ್ರದಾನ ಮತ್ತು ಅಂಗಾಂಗ ದಾನಕ್ಕಾಗಿ ನೋಂದಣಿ ಮಾಡಿಸಿಕೊಂಡಿದ್ದಾರೆಂದು ಕರ್ನಾಟಕ ರಾಜ್ಯ ಸರ್ಕಾರದ ಅಧಿಕೃತ ಅಂಗಾಂಗ ಕಸಿ ನಿರ್ವಹಣಾ ಸಂಸ್ಥೆಯಾಗಿರುವ 'ಜೀವ ಸಾರ್ಥಕತೆ'ಯು ತನ್ನಲ್ಲಿನ ಸಂಖ್ಯಾಂಶಗಳ ಮೂಲಕ ವಿವರಿಸಿದೆ. ನಾರಾಯಣ ನೇತ್ರಾಲಯದ ಮುಖ್ಯಸ್ಥರಾದ ಡಾ. ಭುಜಂಗ ಶೆಟ್ಟಿ ತಿಳಿಸಿರುವಂತೆ ಅವಶ್ಯಕತೆಯಿದ್ದ ನಾಲ್ವರಿಗೆ ಅಪ್ಪುರವರ ಕಣ್ಣಿನ ಜೋಡಣೆ ಮಾಡಿರುವುದಾಗಿ ತಿಳಿಸಿದ್ದಾರೆ.

**ಭಾವಪೂರ್ಣ ಕಣ್ಣೀರ ವಿದಾಯ**

ತಮ್ಮ ನೆಚ್ಚಿನ ನಟನ ನಿಧನಕ್ಕೆ ಕರುನಾಡ ಅಭಿಮಾನಿಗಳು ಮಾತ್ರವಲ್ಲದೇ, ಭಾಷೆ–ಪ್ರಾದೇಶಿಕತೆಯ ಬೇಧವಿಲ್ಲದೇ ಇಡೀ ಅಭಿಮಾನಿಗಳು, ಸಿನಿಮಾರಂಗವೇ ದುಃಖದಿಂದ ಮರುಗಿತ್ತು. ಸ್ವತಃ ರಾಜ್ಯದ ಮುಖ್ಯಮಂತ್ರಿಗಳು, ದೇಶದ ಪ್ರಧಾನಿಯೂ ಒಳಗೊಂಡಂತೆ ಹಲವಾರು ಗಣ್ಯರು ಅಪ್ಪು ನಿಧನಕ್ಕೆ

ಸಂತಾಪ ಕೋರಿದರು. ಅಚ್ಚರಿಯೆಂಬಂತೆ ಹಲವಾರು ಅಂತರಾಷ್ಟ್ರೀಯ ಸುದ್ದಿ ಮಾಧ್ಯಮಗಳು ಕೂಡ ಅಪ್ಪು ಸಾವಿನಿಂದಿಡಿದು ಅಂತ್ಯಕ್ರಿಯೆವರೆಗಿನ ಎಲ್ಲಾ ಪ್ರಕ್ರಿಯೆಗಳನ್ನು ಪ್ರಸಾರ ಮಾಡಿದ್ದವು. ಯಾವುದೇ ಜಾತಿ, ಮತ, ಲಿಂಗ, ವಯಸ್ಸಿನ ಬೇಧವಿಲ್ಲದೇ ರಾಜ್ಯದ ಮೂಲೆ ಮೂಲೆಗಳಿಂದ ಅಭಿಮಾನಿಗಳು ಆಗಮಿಸಿ, ತಮ್ಮ ನೆಚ್ಚಿನ ನಟನ ಪಾರ್ಥಿವ ಶರೀರವನ್ನು ನೋಡಿ ಕಣ್ತುಂಬಿಕೊಳ್ಳುತ್ತಿದ್ದುದ್ದನ್ನು ನೋಡಿ 'ಅಪ್ಪು ಒಬ್ಬ ಅದ್ಭುತ ಕಲಾವಿದ ಎನ್ನುವುದಕ್ಕಿಂತಲೂ, ಒಬ್ಬ ಅತ್ಯದ್ಭುತ ಮಾನವೀಯತೆಯನ್ನುಳ್ಳ ವ್ಯಕ್ತಿತ್ವ'ವೆನ್ನುವುದು ದೃಢವಾಯಿತು. ಅವರ ಕುಟುಂಬದವರೊಂದಿಗೆ ರಾಜ್ಯಸರ್ಕಾರವು ಅಂತಿಮ ವಿಧಿ–ವಿಧಾನ, ಅಂತ್ಯ ಸಂಸ್ಕಾರದ ಬಗ್ಗೆ ಚರ್ಚಿಸಿತು. ನಂತರ ಎಲ್ಲಾ ಅಗತ್ಯ ಮುನ್ನೆಚ್ಚರಿಕೆಗಳೊಂದಿಗೆ ಅಭಿಮಾನಿಗಳು, ಕುಟುಂಬಸ್ಥರು ಹಾಗೂ ಬಂಧು ಮಿತ್ರರಿಗೆ ಅಂತಿಮ ದರ್ಶನಕ್ಕೂ ಅವಕಾಶ ಮಾಡಿಕೊಟ್ಟಿತು. ವಿಶೇಷ ಸರ್ಕಾರಿ ಗೌರವದೊಂದಿಗೆ 'ಕಂಠೀರವ ಸ್ಟುಡೀಯೋ'ದಲ್ಲಿ ಅವರ ಅಂತ್ಯಸಂಸ್ಕಾರವನ್ನು ನೆರವೇರಿಸಲಾಯಿತು. ಅಪಾರ ಸಂಖ್ಯೆಯಲ್ಲಿದ್ದ ಅಭಿಮಾನಿಗಳನ್ನು ನಿಯಂತ್ರಿಸಲು ಪೋಲೀಸ್ ಇಲಾಖೆಯು ಸಾಕಷ್ಟು ಶ್ರಮ ವಹಿಸಿತ್ತು. ಅವರ ಅಂತ್ಯಸಂಸ್ಕಾರಕ್ಕೆ ಹರಿದು ಬಂದ ಜನ ಸಾಗರವು ಮಹಾತ್ಮ ಗಾಂಧೀಯವರ ಅಂತ್ಯಸಂಸ್ಕಾರಕ್ಕಿಂತಲೂ ಹೆಚ್ಚಿತ್ತು ಎಂಬುದಾಗಿ ಈ ಹಂತದಲ್ಲಿ ಒಂದಷ್ಟು ಮಾಧ್ಯಮಗಳು ಸುದ್ದಿ ಪ್ರಸಾರಿಸಿದ್ದವು.

ಖ್ಯಾತ ಹಾಲು ಉತ್ಪಾದಕ ಮತ್ತು ಹಾಲಿನ ಉತ್ಪನ್ನಗಳ 'ಅಮುಲ್' ಸಂಸ್ಥೆಯು 'ಯುವರತ್ನ ಫಾರ್ ಮಿಲಿಯನ್ಸ್' ಎಂಬ ರೇಖಾಚಿತ್ರದ ಮೂಲಕ ತನ್ನ ವಿಶೇಷ ಶ್ರದ್ಧಾಂಜಲಿಯನ್ನು ಸಲ್ಲಿಸಿತು. ರಾಜ್ಯದ ಗ್ರಾಮೀಣ ಮಾನವ ಸಂಪನ್ಮೂಲ ತಾಂತ್ರಿಕ ಪ್ರತಿಷ್ಠಾನವು ಪುನೀತ್ ನೆನಪಿಗಾಗಿ ಚಲನಚಿತ್ರ ಛಾಯಾಗ್ರಾಹಕರು ಮತ್ತು ತಾಂತ್ರಿಕ ವರ್ಗದವರಿಗಾಗಿ ಸ್ವಯಂ ಉದ್ಯೋಗ ಆರಂಭಿಸಲು ಬಯಸುವ ಯುವಕ–ಯುವತಿಯರಿಗಾಗಿ 'ಉದ್ಯಮಿಯಾಗಿ, ಉದ್ಯಮ ನೀಡು' ಎಂಬ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಮಲಬಾರ್ ಗೋಲ್ಡ್ ಮತ್ತು ಡೈಮಂಡ್‌ನ ಹಾಗೂ ಮಣಪ್ಪುರಂ ಗೋಲ್ಡ್‌ಲೋನ್ ಕಂಪೆನಿಗಳ ರಾಯಭಾರಿಗಳಾಗಿ ಕಾರ್ಯನಿರ್ವಹಿಸಿದ್ದಕ್ಕಾಗಿ ಆ ಸಂಸ್ಥೆಯು ಕೂಡಾ ತನ್ನ ಭಾವಪೂರ್ಣ ಶೃದ್ಧಾಂಜಲಿಯನ್ನು ಅರ್ಪಿಸಿತು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ವಿಶಿಷ್ಟ ರೀತಿಯಲ್ಲಿ ಭಾವಪೂರ್ಣ ಶೃದ್ಧಾಂಜಲಿಯನ್ನು ಸಲ್ಲಿಸಿತು. ಅಭಿಮಾನಿಗಳು ತಮ್ಮ ನೆಚ್ಚಿನ ನಟನ ಅಗಲುವಿಕೆಯ ನೆನಪಿನಲ್ಲಿ ಹಲವಾರು ಅಭಿಮಾನಿ ಸಂಘಟನೆಗಳಿಂದ ರಕ್ತದಾನ, ಅನ್ನದಾನ ಕಾರ್ಯಕಮವನ್ನು ನಡೆಸಲಾಗಿತ್ತು. ಅವರ ನಿಧನದ ನಂತರ, 2021ರಲ್ಲಿ ಗೌರವಾರ್ಥವಾಗಿ ಕರ್ನಾಟಕ ರಾಜ್ಯದ ಅತ್ಯುನ್ನತ ನಾಗರೀಕ ಪ್ರಶಸ್ತಿ 'ಕರ್ನಾಟಕ ರತ್ನ'ವನ್ನು ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಮರಣೋತ್ತರ 'ಪದ್ಮಶ್ರೀ' ನೀಡುವಂತೆಯೂ ಆಗ್ರಹಿಸಲಾಗಿತ್ತು.

**ಉಪಸಂಹಾರ**

ಪುನೀತ್ ರಾಜಕುಮಾರ್‌ರವರ ವ್ಯಕ್ತಿತ್ವ ಮತ್ತು ಬದುಕು ನಿಜಕ್ಕೂ ಯುವಜನತೆಗೆ ಅನುಕರಣೀಯವಾದುದು. ತಮ್ಮ ತಂದೆಯ ಮೂಲಕ ಚಿತ್ರರಂಗದಲ್ಲಿ ನಟನೆಯ ಕ್ಷೇತ್ರಕ್ಕೆ ಕಾಲಿಟ್ಟು, ಅತೀ ಕಡಿಮೆ ಅವಧಿಯಲ್ಲಿ ಕೋಟ್ಯಂತರ ಅಭಿಮಾನಿಗಳ ಮನವನ್ನು ತಲುಪಿದವರು. ತಮ್ಮ ಶಕ್ತಿಯನ್ನು

ಸಂಪೂರ್ಣವಾಗಿ ನಟನೆ, ಗಾಯನ, ನಿರ್ಮಾಣ ಇವುಗಳಿಗೆ ಮಾತ್ರವೇ ಸೀಮಿತಗೊಳಿಸದೇ ಸಾಮಾಜಿಕ ಸೇವೆಗಾಗಿಯೂ ತಮ್ಮ ಬದುಕನ್ನು ತೊಡಗಿಸಿಕೊಂಡರು. ದಾನ–ಸಹಾಯದ ನೆಪದಲ್ಲಿ, ಕೇವಲ ಜನಪ್ರಿಯತೆಗಾಗಿ ಅದರ ಹಿಂದೆ ಹೋಗುತ್ತಿರುವ ಈ ಕಾಲಘಟ್ಟದಲ್ಲಿ, ತಾವು ಮಾಡುತ್ತಿದ್ದ ಸೇವೆಯ ಬಗ್ಗೆ ಎಲ್ಲಿಯೂ ಚರ್ಚಿಸದವರು. 'ನನ್ನ ಜೀವನವೇ, ನನ್ನ ಸಂದೇಶ' ಎಂಬ ಗಾಂಧೀಜಿಯವರ ಮಾತಿನಂತೆ ಪುನೀತ್‌ರವರ ಜೀವನವು ಮೌಲ್ಯಯುತವಾದುದಾಗಿದೆ. 'ನೀನು ಮಾಡುವ ಕೆಲಸದಿಂದಷ್ಟೇ, ನಿನಗೆ ಹೆಸರು, ಕೀರ್ತಿ ಬರಬೇಕೇ ಹೊರತು; ಪ್ರಚಾರ, ಹೆಸರು, ಜನಪ್ರಿಯತೆಗಾಗಿಯೇ ನೀನು ಕೆಲಸ ಮಾಡುವುದಲ್ಲ' ಎಂಬ ಜೀವನದ ನೈಜ ಪಾಠವನ್ನು ತಮ್ಮ ಜೀವನದ ಮೂಲದ ಹೇಳಿಕೊಟ್ಟಿದ್ದಾರೆ. ಸ್ವಲ್ಪವೂ ವ್ಯವಧಾನವಿಲ್ಲದ ಇಂದಿನ ಸ್ಪರ್ಧಾತ್ಮಕ ಜೀವನದಲ್ಲಿ, ಬದುಕಿನ ಆದರ್ಶಗಳನ್ನು ತಾನು ಬದುಕಿದ ಕ್ರಮದ ಮೂಲಕ ಹೇಳಿಕೊಟ್ಟಿದ್ದಾರೆ. ಆದ್ದರಿಂದ ಇಂತಹ ಒಂದಷ್ಟು ಸಕಾರಾತ್ಮಕ ಅಂಶಗಳನ್ನು ನಮ್ಮಲ್ಲಿ ಅಳವಡಿಸಿಕೊಂಡರೆ ಅವರು ನಮ್ಮೊಂದಿಗೆ, ನಮ್ಮ ಸಾಮಾಜಿಕ ಮೌಲ್ಯಗಳೊಂದಿಗೆ ಯಾವಾಗಲೂ ಜೀವಂತವಾಗಿರುತ್ತಾರೆ.

**ಅಂತರ್ಜಾಲ ಮಾಹಿತಿಗಳು**


- https://en.m.wikipedia.org/wiki/Puneeth_Rajkumar
- https://mobile.twitter.com/BSYBJP/status/1244883489335336961?ref_src=twsrc%5Etfw%7Ctwcamp%5Etweetembed%7Ctwterm%5E1244883489335336961%7Ctwgr%5E%7Ctwcon%5Es1_&ref_url=https%3A%2F%2Fd24299863701308117 43.ampproject.net%2F2201212122003%2Fframe.html
- https://www.google.com/amp/s/www.newindianexpress.com/entertainment/kannada/2015/oct/15/Puneeth-Sings-for-Charity-829770.amp
- http://www.google.com/search?hl=WBvoloPtLcXTos6xPKnz_IuFOIQg;1644343614943&q=Kannada+Puneeth+Rajkumar+songs&sa=X&ved=2ahUKEwjTi7qo2fD1AhVzzGHQ1uDYMQ1QJ6BAgXEAE&biw=360&bih=686&dpr=2